ಕರ್ನಾಟಕ ಸರ್ಕಾರ

ಸಂ:ಕಂಇ/ಭೂಸ್ವಾ-5(2)/ವಿನಿವ-183/2019-20 1214

ಆಯುಕ್ತರವರ ಕಛೇರಿ,
ಪು/ಪು & ಭೂಸ್ವಾಧೀನ, ಕೃ.ಮೇ.ಯೋ.,
ನವನಗರ, ಬಾಗಲಕೋಟೆ.
ದಿನಾಂಕ: 21-11-2019.

ಇವರಿಗೆ,

ಹೆಚ್ಚುವರಿ ವಿಶೇಷ ಭೂಸ್ವಾಧೀನಾಧಿಕಾರಿ,
ಕೃ.ಮೇ.ಯೋ., ಬೀಳಗಿ.

ಮಾನ್ಯರೇ,

ವಿಷಯ:- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರ್ವಸತಿ ಮತ್ತು ಪುನರ್ನಿರ್ಮಾಣ ಅಧಿನಿಯಮ 2013ರ ಕಲಂ 25ರಡಿ ಅವಧಿ ವಿಸ್ತರಿಸುವ ಕುರಿತು.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂ.ಎಲ್.ಎ.ಕ್ಯೂ/ಎಸ್.ಆರ್-13/2014-15/396, ದಿನಾಂಕ: 08-11-2019.

-000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖರನ್ವಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರ್ವಸತಿ ಮತ್ತು ಪುನರ್ನಿರ್ಮಾಣ ಅಧಿನಿಯಮ 2013ರ ಕಲಂ 19ರಡಿ ಅಂತಿಮ ಅಧಿಸೂಚನೆಯನ್ನು ದಿನಾಂಕ: 15-11-2017 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಸದರಿ ಪ್ರಕರಣದಲ್ಲಿ ತಾಂತ್ರಿಕ ಇಲಾಖೆಯವರಿಂದ ಇಂದಿನರೆಗೂ ಕಟ್ಟಡಗಳ ಅಂದಾಜು ಮೌಲ್ಯ ಮಾಪನ ಪತ್ರಿಕೆಗಳು ಈ ಕಾರ್ಯಾಲಯಕ್ಕೆ ಸಲ್ಲಿಸಿದ್ದು ಸದರ ಐತೀರ್ಪು ರಚಿಸುವಲ್ಲಿ ಭೂಸ್ವಾಧೀನ ಕಾಯ್ದೆ ಪ್ರಕಾರ ನಿಯಮಾನುಸಾರ ಕ್ರಮ ವಹಿಸಬೇಕಾಗಿದ್ದು ಭೂಸ್ವಾಧೀನದಲ್ಲಿ ಸೂಕ್ತ ಪರಿಹಾರ ಮತ್ತು ಪಾರದರ್ಶಕತೆ ಪುನರವಸತಿ ಮತ್ತು ಪುನರವ್ಯವಸ್ಥೆ ಹಕ್ಕುಗಳ (ಕರ್ನಾಟಕ) ನಿಯಮಗಳು, 2015 ಕಲಂ 28ರಡಿ ಪ್ರಕಟಣೆ ಅಂತಿಮ ದಿನಾಂಕವು ಪ್ರಕರಣ 19(1) ರಡಿಯಲ್ಲಿನ ಘೋಷಣಾ ಪ್ರಕಟಣೆ ದಿನಾಂಕವಾಗಿರತಕ್ಕದ್ದು ಅಂತಾ ಇರುವ ಕಾರಣ ಸದರಿ ಪ್ರಕರಣದಲ್ಲಿ ಕಲಂ 19(1) ಗೆಜೆಟ್ ಅಧಿಸೂಚನೆ ಅಂತಿಮವಾಗಿ ಗ್ರಾಮ ಪಂಚಾಯತ ಕುಂದರಗಿಯಲ್ಲಿ ಪ್ರಸಿದ್ದಿಪಡಿಸಿದ ಅಂತಿಮ ದಿನಾಂಕ: 27-03-2018 ನ್ನು ಅಂತಿಮ ದಿನಾಂಕವೆಂದು ಪರಿಗಣಿಸಿ ಸದರ ಪ್ರಕರಣವನ್ನು ದಿನಾಂಕ: 26-03-2020 ರವರೆಗೆ ಭೂಸ್ವಾಧೀನ ಕಾಯ್ದೆ 25ರಡಿ ಅವಧಿ ವಿಸ್ತರಿಸಲು ಕೋರಿರುತ್ತೀರಿ.

ಮೇಲಿನ ಪ್ರಕರಣದಲ್ಲಿ ಬೀಳಗಿ ತಾಲೂಕಿನ ಕುಂದರಗಿ ಗ್ರಾಮದ ಎಲ್ಎಕ್ಯೂ/ಎಸ್ಆರ್-13/2014-15ರ ಪ್ರಕರಣದಲ್ಲಿ ತಮ್ಮ ಕೋರಿಕೆಯನ್ನು ಪರಿಗಣಿಸಿ ಕಲಂ 25ರಡಿ ದಿನಾಂಕ: 26-03-2020 ರವರೆಗೆ ಕಾಲಾವಕಾಶ ವಿಸ್ತರಿಸಿ ಅನುಮತಿ ನೀಡಿದೆ. ಕಾಲಾವಕಾಶ ನೀಡಿರುವ ಬಗ್ಗೆ ಅಂತರ್ಜಾಲದಲ್ಲಿ ಅಪ್‌ಲೋಡ ಮಾಡಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

| |
|---|
| ಕಛೇರಿ ಟಿಪ್ಪಣಿ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ. |

ಆಯುಕ್ತರು,
ಪುಪು/ಭೂಸ್ವಾಧೀನ, ಕೃ.ಮೇ.ಯೋ.,
ನವನಗರ, ಬಾಗಲಕೋಟೆ.
ಇವರ ಪರವಾಗಿ.

**ಪ್ರತಿಯನ್ನು:**

1) ಸಿಸ್ಟಂ ಮ್ಯಾನೇಜರ, ಕಂಪ್ಯೂಟರ ವಿಭಾಗ, ಕೃಮೇಯೋ, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ.
2) ಕಛೇರಿ ಕಡತಕ್ಕೆ